

# ಹೊಂಬೆಳಗು

■ ಕನಕರಾಜ್ ಆರನಕಟ್ಟೆ

ನಲವತ್ತಾರನೆಯ ಹುಟ್ಟುಹಬ್ಬದ ಹಿಂದಿನ ರಾತ್ರಿ ಶೋಭಾ ಕಡಲ ತಡಿಯಲ್ಲಿ ಕೂತಿದ್ದಳು. ಮನಸ್ಸಿಗೆ ಹಿತವೆನಿಸಲು ಶುರುವಾಗಿ ನಿಮಿಷಗಳು ಕಳೆದಿದ್ದವು. ಅವಳು ಕೂತಿದ್ದುದು ಆ ದ್ವೀಪದ ಉತ್ತರ ದಿಕ್ಕಿಗೆ... ಸಣ್ಣ ಮತ್ತು ದೊಡ್ಡ ಅಲೆಗಳ ಅನಿಯಮಿತ ಸದ್ದಿಗೆ ಮನಸ್ಸು ಕೊಟ್ಟು ಕೂತಿದ್ದವಳನ್ನು ಸ್ವಲ್ಪ ಹೊತ್ತು ಮುಂಚೆ ಮೊಬೈಲ್ ಕರೆಯೊಂದರಲ್ಲಿ ಕೇಳಿದ ವಿಷಯಗಳು ಮತ್ತೆ ಗಲಿಬಿಲಿಗೊಳಿಸಿದವು. ಥತ್... ರೂಪ ಎನ್ನುವ ಹೆಸರಲ್ಲೇ ನಾನು ಆಕೆಯ ಜೊತೆ ಮಾತನಾಡಬೇಕಿತ್ತೇ ಹಾಳಾದವಳು... ನನ್ನನ್ನೇ ರೂಪ ಎಂದುಕೊಂಡು ನನ್ನ ಮೊಬೈಲ್ ನಂಬರ್ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಡುತ್ತಾಳಂತೆ... ಕೊಡ್ಲಿ ಬಿಡು... ನಾನ್ ತಪ್ಪು ಮಾಡಿದ್ರೆ ತಾನೇ ಹೆದರಬೇಕು... ಅಷ್ಟಕ್ಕೂ ದೇಶ ಬಿಟ್ಟು ದೇಶ ಬರ್ತಾರಾ ಪೊಲೀಸರು! ಅದೂ ಇಂಥ ಕೇಸ್‌ಗಾಗಿ... ಆ ಹಾಳಾದ ಈಶ್ವರ್ ಈ ಸಮಯದಲ್ಲೇ ರೂಪ ಎನ್ನುವ ಹೆಸರಿನ ಹೆಂಗಸಿನ ಜೊತೆ ಓಡಿ ಹೋಗಬೇಕಿತ್ತೇ?!... ಮನುಷ್ಯರೊಳಗಿನ ನೀಚತನ ಈ ಕಡಲಿನಷ್ಟೇ ಆಳವಾದುದೇನೊ...

ನನಗೆ ನೆಮ್ಮದಿ ಎನ್ನುವುದೇ ಇಲ್ಲವೇ ಅಥವಾ ಸಮಸ್ಯೆಗಳನ್ನು ನಾನೇ ಸೃಷ್ಟಿಸಿಕೊಳ್ಳುತ್ತಿದ್ದೇನೆಯೇ? ಸಮಸ್ಯೆಗಳಿಗೆ ಹೆದರಿ ಈ ದೇಶಕ್ಕೆ ಬಂದೆನೇ? ಈ ದ್ವೀಪದಂತೆ ಬದುಕನ್ನು ನಾನೇ ಸಂಕುಚಿತಗೊಳಿಸಿಕೊಂಡೆನೇ ಅಥವಾ ರೋಗರುಜಿನಗಳಿಂದ ಇಲ್ಲಿಯ ದ್ವೀಪವಾಸಿಗಳು ದೂರವಿರುವಂತೆ ನನ್ನ ಬದುಕೂ ಸುರಕ್ಷಿತವಾಗಿದೆಯೇ? ಎಮಿಲಿ ಜೆಸ್ಸಿ ಟೈಲರ್ ಹೇಳಿದಂತೆ ಜೀವನವನ್ನು ಹೊಸ ದಾರಿಗೆ ತಿರುಗಿಸಿಕೊಳ್ಳೋಣವೇ? ಕೊನೆಯ ದಿನಗಳು ಎಂದು ಯಾವುದನ್ನು ಹೇಳುವುದು? ತನ್ನ ನಿಖರ ದಿನಾಂಕವನ್ನು ತಿಳಿಸಿಯೇ ಸಾವು ಮನುಷ್ಯರನ್ನು ತಲುಪುತ್ತದೆಯೆ? ಅದರ ಭಯಕ್ಕಾಗಿ ಮನಸ್ಸಿಗೆ ಇಷ್ಟವಿಲ್ಲದ ವಿಷಯಗಳನ್ನು ಒಪ್ಪಿಕೊಳ್ಳಬೇಕೇ? ಅಥವಾ ಹೇಗಿದ್ದರೂ ಸಾಯುವುದು ಖರೆ, ಆ ಸಮಯವನ್ನು ಒಂಟಿಯಾಗಿ ನಿಂತು ಎದುರುಗೊಳ್ಳೋಣವೇ?

ಮನಸ್ಸಿನ ತುಂಬಾ ಸಿಕ್ಕುಗಳು! ಅವುಗಳಿಂದ ಬಿಡಿಸಿಕೊಳ್ಳಲೊ ಎಂಬಂತೆ ಕಡಲ ನೋಡಿದಳು.

ಕತ್ತಲಲ್ಲದು ಚೆಂದ ಕಾಣುತ್ತಿತ್ತು. ಕಣ್ಣ ಮತ್ತಷ್ಟು ಅಗಲಿಸಿ ನೋಡಿದಳು. ಹರಡುತ್ತಿದ್ದ ಚಂದಿರ! ಆಗಸದಿಂದ ಸುರಿಯುತ್ತಿರುವ ಬೆಳಕು! ಆ ಪೋಸ್ಟ್ ಮಾಸ್ಟರನ ಮುಖ ಕಣ್ಮುಂದೆ ಬಂತು! ತಕ್ಷಣವೇ ಇಂಗ್ಲೆಂಡಿನ ಎಮಿಲಿ ಜೆಸ್ಸಿ ಟೈಲರ್‌ಳ ಕಳೆಗುಂದಿದ ಮುಖವೂ... ಮನಸ್ಸು ಕಸಿವಿಸಿಗೊಳಗಾಯ್ತು.

ಏನಾಯ್ತು ಅವಳಿಗೆ? ಯಾಕೆ ದಿಢೀರ್ ಎಂದು ಮಾಯವಾದಳು!? ಎಲ್ಲಿ ಹೋದಳೋ!? ಹೋಗಿ ಹುಡುಕೋಣವೇ!?

ಅಲೆಗಳು ತೇಲುತ್ತಾ ದಂಡೆಯ ಸ್ಪರ್ಶಿಸುವುದನ್ನು ನೋಡತೊಡಗಿದಳು. ನೊರೆಗಳು ಉಕ್ಕುಕ್ಕುತ್ತಾ ಅವಳತ್ತ ಬರುವಂತೆ ಕಂಡು ಚಣ ಅಂಜಿದರೂ ನಕ್ಕು ಮೊಬೈಲ್ ತೆಗೆದಳು. ನಾಳೆ ತಾನೇ ನನ್ನ ಬರ್ತ್ ಡೇ... ಓ! ಮರೆತೇ ಹೋದೆ! ಇಷ್ಟು ಬೇಗ ಸಂದೇಶಗಳು... ಇನ್ಸ್ಟಾಗ್ರಾಮ್, ಫೇಸ್‌ಬುಕ್ ಮೆಸೆಂಜರ್, ವಾಟ್ಸಾಪ್ ಮತ್ತು ಇ–ಮೈಲ್‌ಗಳ ತುಂಬಾ ಶುಭಾಶಯಗಳ ಮಹಾಪೂರ. ಅವಳ ಎದೆ ಉಕ್ಕಿ ಎದ್ದು ಕಡಲತ್ತ ಓಡಿದಳು. ಅಲೆಗಳ ಮೇಲೆ ಉಯ್ಯಾಲೆಯಾಡುತ್ತಾ ಕೈಗಳ ನೀಟಿ ಮುಖ ಎತ್ತಿ ಆಕಾಶವ ನೋಡಿ 'ಲೈಫ್ ಈಸ್ ಸೋ ಬ್ಯೂಟಿಫುಲ್' ಎಂದು ಕೂಗಿದಳು.

ಮೂರು ವರ್ಷಗಳ ಹಿಂದೆ ಹೈದ್ರಾಬಾದಿನ ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದ ಸಮಯದಲ್ಲಿ ಈ ಕಾಲದ ಯೌವನಿಗರು ಉಪಯೋಗಿಸುವ ಸೋಷಿಯಲ್ ಮೀಡಿಯಾಗಳಲ್ಲಿ ತನ್ನನ್ನು ಸ್ಥಾಪಿಸಿಕೊಂಡಿದ್ದಳು ಶೋಭಾ. ಶಾಸ್ತ್ರೀಯವಾಗಿ ಕರ್ನಾಟಕ ಸಂಗೀತ ಕಲಿತಿದ್ದರಿಂದ ಆಗಾಗ ಶಾಲೆಯಲ್ಲಿ ಭಾವಗೀತೆಗಳನ್ನು ಹಾಡಿ ಎಲ್ಲರ ಮುಖ್ಯವಾಗಿ ಗಂಡಸರೆದೆಗಳೊಳಗೆ ಪ್ರವಾಹ ಉಕ್ಕಿಸುತ್ತಿದ್ದಳು. ಮದುವೆಯಾಗದೇ ಇದ್ದ ಅವಳನ್ನು ವರಿಸಲು ಹತ್ತಾರು ಮಂದಿ ಗಂಡಸರು ಯತ್ನಿಸಿ ಸೋತಿದ್ದರು. ಅವರಲ್ಲಿ ಈಶ್ವರ್ ಎಂಬ ಗಣಿತದ ಮೇಷ್ಟ್ರು ಇದ್ದ. ತನ್ನ ಗಂಭೀರ ಮಾತುಗಳಿಂದಲೇ ನೂರಾರು ಜನರನ್ನು ಸೆಳೆದು ಅವರಿಂದ ತನ್ನ ಕೆಲಸಗಳನ್ನು ಸುಲಭವಾಗಿ ಮಾಡಿಕೊಳ್ಳುವಂತಹ ಕಿಲಾಡಿ.